ತಾಲ್ಲೂಕು.	ಹೋಬಳಿ.	ಗ್ರಾಮ.		ಮಾಡಬೇಕಾದ ಬದಲಾವಣೆ.
		ಗೆಜೆಟ್ಟಿನಲ್ಲಿ ಜಂಜರ್ ನಂಬರ್	ಹೆಸರು.	
7. ತಿಪ್ಪಟ್ಟು ...	ಜಂಗಂಕೋಟೆ ...	36	ದೊಡ್ಡಹಾರಡಿ ...	"ಜಂಗಂಕೋಟೆ ಪ್ಲಾಂಟೇರ್ಷ್" ಎಂದು ತಿದ್ದತಕ್ಕದ್ದು.
8. ಮಾಲೂರು.	ಗೆಜಿಹಳ್ಳಿ ಪಟ್ಟಣ		ರಾಮಚಂದ್ರಾಪುರ ಪ್ಲಾಂಟೇರ್ಷ್.	
			ಹೊಸಕುರಂಡಹಳ್ಳಿ ಪ್ಲಾಂಟೇರ್ಷ್	ಮಾಲೂರು ಹೋಬಳಿಗೆ ಸೇರಿಸತಕ್ಕದ್ದು.
			ಕುರಂಡಹಳ್ಳಿ ಪ್ಲಾಂಟೇರ್ಷ್.	
			ಜೋಡಿ ಪಟಗೇನಹಳ್ಳಿ ...	
			ದೆಣ್ಣೇರಿ ಪ್ಲಾಂಟೇರ್ಷ್	ಮಾಸ್ತಿ ಹೋಬಳಿಗೆ ಸೇರಿಸತಕ್ಕದ್ದು.
9. ಮುಳಬಾಗಲು.	ಬೈರಕೂರು	61	ಚಿಂತಲಹಳ್ಳಿ (ಜೋಡಿ)	ಮುಳಬಾಗಲ್ ಹೋಬಳಿಗೆ ವರ್ಗಮಾಡತಕ್ಕದ್ದು.
	ಮಲ್ಲನಾಯಕನಹಳ್ಳಿ.	33	ತಿಪ್ಪದೊಡ್ಡಿ ...	
		34	ಕಗ್ಗನಹಳ್ಳಿ ...	
		35	ಕುಕ್ಕಲದೊಡ್ಡಿ	
		36	ಕುರುಬರಹಳ್ಳಿ ...	ಬೈರಕೂರು ಹೋಬಳಿಗೆ ವರ್ಗಮಾಡತಕ್ಕದ್ದು.
		37	ಚಿನ್ನಬಾಲೆಪಲ್ಲಿ ...	
		38	ಜಲ್ಲಪಲ್ಲಿ ...	
		39	ಗೋಣೀಕೊಪ್ಪ ...	
		40	ಉಗಣಿ ...	

ತಾರೀಖು 8ನೆ ಆಗಸ್ಟು 1907.

ನಂ. ರೆ. 1141—ಲ್ಯಾ. ರೆ. 77-07-1, ಈ ಕೆಳಗೆ ನಮೂದಿಸುವ ಡೆಪ್ಯೂಟಿ ಕಮಿಷನರುಗಳ ಬಡತಿಗಳನ್ನು 1907ನೆ ಇಸವಿಯ ಜುಲೈ 3ನೆ ತಾರೀಖಿನಿಂದ ಮಂಜೂರ್ಮಾಡಿದೆ :—

ಮಿ॥ ಡಿ. ದೇವರಾಜ ಅರಸಿನವರು—ಡೆಪ್ಯುಟಿ ಕಮಿಷನರ 2ನೆ ತರಗತಿಯಿಂದ 1ನೆ ತರಗತಿಗೆ.

ಮಿ॥ ಎಂ. ಕಾಂತರಾಜ ಅರಸಿನವರು—ಡೆಪ್ಯುಟಿ ಕಮಿಷನರ 3ನೆ ತರಗತಿಯಿಂದ 2ನೆ ತರಗತಿಗೆ.

ತಾರೀಖು 10ನೆ ಆಗಸ್ಟು 1907.

ನಂ. ಫೈ. 673—ಸೆ. ರೆ. 50-07-2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣಾನುಸಾರವಾಗಿ, ಎಕ್ಸೈಸ್ ಕಮಿಷನರವರ ಕಚೇರಿಗೆ ಲಗತ್ತು ಮಾಡಿರುವ ಅಸಿಸ್ಟೆಂಟ್ ಕಮಿಷನರ್ ಮಿ॥ ಎ. ವ್ಯತ್ಯಂಜಯ ಐಯ್ಯರಿಗೆ 1907ನೆ ಇಸವಿಯ ಆಗಸ್ಟು 15ನೆ ತಾರೀಖಿನಿಂದ ಹತ್ತು ದಿವಸಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿದೆ.

ಹುಕುಂ ಖವೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ನ್ಯಾಯವಿಧಾಯಕ ಸಭೆಯ ಕೌನ್ಸಿಲ್.

ತಾರೀಖು 14ನೆ ಆಗಸ್ಟು 1907.

ನಂ. ಲೆ. ಕೌ. 69, 1907ನೆ ಇಸವಿಯ ಆಗಸ್ಟು 28ನೆ ತಾರೀಖಿನ ಬುಧವಾರ ಮಧ್ಯಾಹ್ನಾತ್ಪರ 3 ಘಂಟೆಗೆ ಬೆಂಗಳೂರು ಪಬ್ಲಿಕ್ ಕಚೇರಿಗಳ ಕಟ್ಟಡದಲ್ಲಿ ಮೈಸೂರು ಸೀಮೆಯ ಲೆಜಿಸ್ಲೇಟಿವ್ ಕೌನ್ಸಿಲ್ ಯಾ ನ್ಯಾಯವಿಧಾಯಕ ಸಭೆಯು ಸೇರುವುದು.

ಅಪ್ಪಣೆಯ ಮೇರೆಗೆ,
ಕೆ. ವೈಲಾರರಾವ್,
ಮೈಸೂರು ಸೀಮೆಯ ನ್ಯಾಯವಿಧಾಯಕ ಸಭೆಯ ಸೆಕ್ರೆಟರಿ.

ಫೈನಾನ್ಷಿಯಲ್ ಡಿಪಾರ್ಟ್‌ಮೆಂಟ್.

ತಾರೀಖು 10ನೆ ಆಗಸ್ಟು 1907.

ನಂ. ಫೈ. 675-47-07, ನಿಕಲ್ ಎಂಬ ಲೋಹದ ಒಂದು ಆಣೆಯ ನಾಣ್ಯದ ಚಲಾವಣೆಗೆ ಅಧಿಕಾರ ಕೊಟ್ಟು, ಮತ್ತು ಸದರಿ ನಾಣ್ಯದ ವಿವರಣೆಯನ್ನು ನಮೂದು ಮಾಡಿ ಇಂಡಿಯಾ ಸರ್ಕಾರದ ಫೈನಾನ್ಸ್ ಇಲಾಖೆಯಿಂದ ಹುಟ್ಟಿದ 1907ನೆ ಇಸವಿಯ ಜುಲೈ 22ನೆ ತಾರೀಖಿನ 4597 A. ನೆ ನಂಬರಿನ ಇದರಡಿ ಕಂಡ ಇನ್ಸ್ಟ್ರಾರ್ಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

"ಅಕೌಂಟ್ಸ್ ಮತ್ತು ಫೈನಾನ್ಸ್ ಟಂಕಸಾಲೆ

22ನೆ ಜುಲೈ 1907.

ನಂ. 4597 A.—1906ನೆ ಇಸವಿ 3ನೆ ನಂಬರ್ ಇಂಡಿಯ್ ಕಾಯಿನೇಜ್ ಯಾ ನಾಣ್ಯಗಳ ತಯಾರಿಯ ಆಕ್ಟಿನ 10ನೆ ಪ್ರಕರಣದ (1)ನೆ ಒಳಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾಸನಮೇತರಾದ ಗವರ್ನರ್ ಜನರಲ್ ರವರು ಇದರಡಿ ಕಂಡ ಹುಕುಂ ದಯಪಾಲಿಸಿರುತ್ತಾರೆ :—

(1) ಸದರಿ ಆಕ್ಟಿನ 6ನೆ ಪ್ರಕರಣದಲ್ಲಿ ಹೇಳಿದ ನಿಕಲ್ ಲೋಹದ ಬಂದಾಣಿಯ ನಾಣ್ಯವು ಇನ್ನು ಮುಂದೆ ಟಂಕಸಾಲೆಯಲ್ಲಿ ತಯಾರ್ಮಾಡಲ್ಪಟ್ಟು ಜಲಾವಣಿಯಲ್ಲಿ ತರಲ್ಪಡತಕ್ಕದ್ದು.

(2) ಅದರ ಏಣು 12 ಸ್ಕಾಲೆಪ್ಸ್ ಯಾ ವರ್ತುಲ ಖಂಡಗಳೊಡನೆ ಉಬ್ಬು ತಗ್ಗಾಗಿರತಕ್ಕದ್ದು, ಅದರ ವ್ಯಾಸ ಯಾ ಮಧ್ಯರೇಖೆಯ ಅತ್ಯಂತಾಧಿಕ ಪ್ರಮಾಣವು 21 ಮಿಲಿಮಿಟರುಗಳೂ ಅದರ ಕನಿಷ್ಠ ಪ್ರಮಾಣವು 19·8 ಮಿಲಿಮಿಟರುಗಳೂ ಇರತಕ್ಕದ್ದು. ಅದರ ಏಣಿಗೆ ರೇಖೆಗಳನ್ನು ಕಡಿಯಕೂಡದು.

(3) ಅದರ ಮೇಲುಭಾಗದಲ್ಲಿ ಶ್ರೀಮತ್ 7ನೆ ಎಡ್ವರ್ಡ್ ಚಕ್ರವರ್ತಿಯವರ ಪ್ರತಿಮೆಯೂ "ಎಡ್ವರ್ಡ್ 7ನೆ ಧೊರೆ ಮತ್ತು ಚಕ್ರವರ್ತಿ", ಎಂಬ ಶಾಸನವೂ ಇರಬೇಕು, ಮತ್ತು ಅದರ ಹಿಂಭಾಗದಲ್ಲಿ, "1" ಎಂಬ ಅಂಕೆಯ ಮೇಲೆ "ಇಂಡಿಯ" ಎಂಬ ಮಾತೂ ಆ ಅಂಕೆಯ ಕೆಳಗೆ ನಾಣ್ಯವು ತಯಾರಾದ ವರ್ಷವೂ ನಮೂದಿಸಲ್ಪಟ್ಟು ಸದರಿ ನಾಣ್ಯದ ಹೆಸರು ಇಂಗ್ಲೀಷ್, ಉರುದು, ನಾಗರಿ, ಬೆಂಗಾಲಿ, ಮತ್ತು ತೆಲಗು ಭಾಷೆಗಳಲ್ಲಿ ಇರತಕ್ಕದ್ದು."

ಹುಕುಂ ಬಮೋಜೇಬ್,
ಯು. ಎಲ್. ಮಾಜುಂದಾರ್,
ಫೈನಾನ್ಷಿಯಲ್ ಸೆಕ್ರೆಟರಿ, ಮೈಸೂರು ಗವರ್ನ್‌ಮೆಂಟ್.

ಮಿಲಿಟರಿ.

ಇನಿ ಹಾರ್ನಾಮೆ.

ತಾರೀಖು 13ನೆ ಆಗಸ್ಟು 1907.

ನಂ. 510-12, ಮೈಸೂರು ಸೇವೆಯ ಘನವನ್ನೆ ವೃದಿದ ಶ್ರೀಮತ್ ಮಹಾರಾಜರವರು ಮೈಸೂರು ಇಂಪೀರಿಯಲ್ ಸರ್ವಿಸ್ ರಿಜಿವೆಂಟಿನಲ್ಲಿ ಈ ಕೆಳಗೆ ಕಂಡ ಬಡ್ತಿಗಳನ್ನು ಕೆಳಗೆ ನಮೂದಿಸುವ ತಾರೀಖುಗಳ ಲಾಗಾಯಿತು ಮಂಜೂರ್ಮಾಡಿರುತ್ತಾರೆ :—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.	ಯಾವ ತಾರೀಖು ಲಾಗಾಯಿತು.
1. ಸರ್‌ಮಸ್ತ್ ಖಾ	ಜಮಾದಾರ್, ಟ್ರೂಪ್ ಕವ್ಯಾಲ್ರಿ ಕವ್ಯಾಂಡರ್ 2ನೆ ಗ್ರೇಡ್.	ರಿಸಾಲದಾರ್, ಟ್ರೂಪ್ ಕವ್ಯಾಂಡರ್ 1ನೆ ಗ್ರೇಡ್	ಜನವರಿ 1—1907
2. ಅಬ್ದುಲ್ ಗಾಫರ್	ಡಿಟೋ 3ನೆ ಗ್ರೇಡ್	ಜಮಾದಾರ್, ಟ್ರೂಪ್ ಕವ್ಯಾಂಡರ್ 2ನೆ ಗ್ರೇಡ್.	ಡಿಟೋ
3. ಸೈಯದ್ ಹುಸೇನ್.	ಡಿಟೋ 4ನೆ ಗ್ರೇಡ್	ಡಿಟೋ 3ನೆ ಗ್ರೇಡ್	ಡಿಟೋ
4. ಮಿರ್ ಅಲ್ಲಿಖಾ	ಡಿಟೋ 5ನೆ ಗ್ರೇಡ್	ಡಿಟೋ 4ನೆ ಗ್ರೇಡ್	ಡಿಟೋ
5. ಮಿರ್ ಸಾದುದ್ದೀನ್.	ರೆಜಿವೆಂಟಲ್ ದಫೇದಾರ್ ಮೇಜರ್.	ಜಮಾದಾರ್, ಟ್ರೂಪ್ ಕವ್ಯಾಂಡರ್ 5ನೆ ಗ್ರೇಡ್.	ಆಗಸ್ಟು 8—1907

ಹುಕುಂ ಬಮೋಜೇಬ್,
ಆರ್. ಜಿ. ಜೋನ್ಸ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟರಿ ಅಸಿಸ್ಟೆಂಟ್.

ಪಬ್ಲಿಕ್ ವರ್ಕ್ಸ್.

ಇನಿ ಹಾರ್ನಾಮೆ.

ತಾರೀಖು 9ನೆ ಆಗಸ್ಟು 1907.

ನಂ. 747—5665, (1) ಹಾಸನ ಡಿವೀಜ್ ಅಫಿಷಿಯೇಟಿಂಗ್ ಎಗ್ಜಿಕ್ಯೂಟಿವ್ ಇಂಜನಿಯರ್ ಮೆ|| ಎಫ್. ಎ. ಸ್ಟೀಲ್ ಯವರಿಗೆ ಮೈಸೂರು ಸರ್ವಿಸ್ ರೆಗುಲೇಷನ್ಸ್ 177ನೆ ಆರ್ಟಿಕಲ್ ಅನುಸರಿಸಿ ಸ್ 1907ನೆ ಇಸವಿ ಆಗಸ್ಟು 15ನೆ ತಾರೀಖಿನಾರಭ್ಯ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 3 ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

(2) ಸರ್ಕಾರಿ ಕೆಲಸಗಳ ಉಪಯೋಗಾರ್ಥವಾಗಿ ಈ ಕೆಳಗೆ ನಮೂದಿಸುವ ಬದಲಾವಣೆಯನ್ನು ಹುಕುಂ ಮಾಡಲ್ಪಟ್ಟಿದೆ.

ಎಗ್ಜಿಕ್ಯೂಟಿವ್ ಇಂಜನಿಯರ್ ಮೆ|| ಕೆ. ಪ್ರಹ್ಲಾದರಾಯರವರನ್ನು ಚಿತ್ರದುರ್ಗ ಡಿವೀಜನಿಂದ ಹಾಸನ ಡಿವೀಜನ್ನಿಗೆ ವರ್ಗ ಮಾಡಲ್ಪಟ್ಟಿದೆ. ಚಾರ್ಜ್ ಕೊಟ್ಟಸಂತರ ಹೊಸ ಕೆಲಸಕ್ಕೆ ಸೇರತಕ್ಕದ್ದು.

ತಾರೀಖು 10ನೆ ಆಗಸ್ಟು 1907.

ನಂ. 753—5690, (1) ಮಾರೀಕಣವೆ ಡಿವೀಜನ್ನನ್ನು ಚಿತ್ರದುರ್ಗ ಡಿವೀಜನ್ನೊಂದಿಗೆ ಸೇರಿಸಬೇಕೆಂದು ಗವರ್ನ್‌ಮೆಂಟಿನವರು ಹುಕುಂ ಮಾಡಿದ್ದರಿಂದ, ಸದರಿ ಮಾರಿಕಣವೆಯನ್ನು ಬಂದು ರೇಂಜನ್ನಾಗಿ ಮಾಡಿ ಚಿತ್ರದುರ್ಗ ಡಿವೀಜನ್ನಿಗೆ ಸೇರಿಸಲ್ಪಟ್ಟಿದೆ.

(2) ಮಾರೀಕಣವೆ ಡಿವೀಜ್ ಅಫಿಷಿಯೇಟಿಂಗ್ ಎಗ್ಜಿಕ್ಯೂಟಿವ್ ಇಂಜನಿಯರ್ ಮೆ|| ಹೆಚ್. ಡಿ. ರೈಸ್ ಯವರು ಮಾರಿಕಣವೆಯನ್ನು ಹೆಡ್‌ಕ್ವಾರ್ಟರ್ಸ್ ಮಾಡಿಕೊಂಡು ಚಿತ್ರದುರ್ಗ ಡಿವೀಜ್ ಚಾರ್ಜಿನಲ್ಲಿರತಕ್ಕದ್ದು.

(3) ಇತಃಪರಹ ಎಲ್ಲಾ ಸರ್ಕಾರಿ ಕಾಗದ ಪತ್ರಗಳನ್ನು ಚಿತ್ರದುರ್ಗ ಡಿವೀಜ್ ಎಗ್ಜಿಕ್ಯೂಟಿವ್ ಇಂಜನಿಯರವರಿಗೆ (ಹೆಡ್‌ಕ್ವಾರ್ಟರ್ಸ್ ಮಾರಿಕಣವೆ) ಎಂಬದಾಗಿ ಬರಿಯಬೇಕು.

ಹುಕುಂ ಬಮೋಜೇಬ್,
ಡಬ್ಲ್ಯೂ. ಮೆಕಹರ್ಟೀ,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್‌ಮೆಂಟ್ ಸೆಕ್ರೆಟರಿ.